**ಸಾಕ್ಷಿಯನ್ನು ದಿನಾಂಕಃ 24.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. ಮುಂದುವರೆದ ಪಾಟೀ ಸವಾಲುಃ 1 ರಿಂದ 12 ಮತ್ತು 14 ನೇ ಪ್ರತಿವಾದಿಗಳ ಪರ ಶ್ರೀಮತಿ. ಡಿ.ಎಸ್.ಎಂ. ವಕೀಲರಿಂದಃ**

ದಾವಾ ಐಟಂ ನಂ. 2 ಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕೇಸು ಬಾಕಿ ಇರುತ್ತದೆಂದರೆ ಸರಿ. ಸದರಿ ದಾವಾ ಐಟಂ ನಂ. 3 ರ ಆಸ್ತಿಯನ್ನು 4 ರಿಂದ 8 ನೇ ಪ್ರತಿವಾದಿಗಳು 15 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಯಾವಾಗ ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ನನ್ನ ತಂದೆಯ ಭಾಗಕ್ಕೆ ಬಂದ ದಾವಾ ಐಟಂ ನಂ. 4 ರ ಆಸ್ತಿಯನ್ನು ಮಾರಾಟ ಮಾಡುವ ವಿಚಾರವಾಗಿ ನಾನು ನನ್ನ ತಂದೆಯ ಮನೆಯಲ್ಲಿರುವಾಗಲೇ ಮಾತುಕತೆಯಾಗುತ್ತಿತ್ತು ಎಂದರೆ ಸರಿ. ಸದರಿ ದಾವಾ ಐಟಂ ನಂ. 4 ರ ಆಸ್ತಿಯ ಸಂಬಂಧ ನನ್ನ ತಂದೆ ದಿನಾಂಕಃ 04.01.2014 ರಂದು 15 ನೇ ಪ್ರತಿವಾದಿಗೆ ನೋಂದಾಯಿತ ಭೋಗ್ಯ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ದಿನಾಂಕಃ 04.12.2018 ರಂದು ನನ್ನ ತಂದೆ 15 ನೇ ಪ್ರತಿವಾದಿಗೆ ಭೋಗ್ಯದ ಹಣವನ್ನು ಹಿಂತಿರುಗಿಸಿ ನೋಂದಾಯಿತ ತೀರುವಳಿ ಭೋಗ್ಯ ಪತ್ರ ಬರೆಸಿಕೊಂಡಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಸದರಿ ಭೋಗ್ಯವನ್ನು ಬಿಡಿಸಿಕೊಳ್ಳಲು ನನ್ನ ತಂದೆ ಬೇರೆಯವರಿಂದ ಸಾಲ ಪಡೆದಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ಸಮಯದಲ್ಲಿ ಅಂದರೆ 2018 ನೇ ಇಸವಿಯಲ್ಲಿ ನಾನು ನನ್ನ ತಂದೆಯ ಜೊತೆಯೇ ಇದ್ದಿರುತ್ತೇನೆಂದರೆ ಸರಿ. ಆ ರೀತಿ ಭೋಗ್ಯದ ಹಣವನ್ನು ತೀರಿಸುವ ಸಲುವಾಗಿ ಹಾಗು ನನ್ನ ಮದುವೆಯ ಖರ್ಚು-ವೆಚ್ಚ ಭರಿಸುವ ಸಲುವಾಗಿ ನನ್ನ

ತಂದೆಯ ಭಾಗಕ್ಕೆ ಬಂದ ದಾವಾ ಐಟಂ ನಂ. 4 ರ ಆಸ್ತಿಯನ್ನು 14 ನೇ ಪ್ರತಿವಾದಿಗೆ ಮಾರಾಟ ಮಾಡುವ ಸಂಬಂಧ ನನ್ನ ತಂದೆ-ತಾಯಿ ಹಾಗು ಸಹೋದರ ಮಾತುಕತೆಯಾಡುತ್ತಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ರೀತಿ ಭೋಗ್ಯ ಬಿಡುಗಡೆ ಮಾಡುವ ಸಂಬಂಧ ಹಾಗು ನನ್ನ ತಂದೆಯು ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿ ಅದರ ವೆಚ್ಚವನ್ನು ಭರಿಸುವ ಸಂಬಂಧ ನನ್ನ ತಂದೆ-ತಾಯಿ ಹಾಗು ಸಹೋದರ ಸೇರಿ ದಾವಾ ಐಟಂ ನಂ. 4 ರ ಆಸ್ತಿಯನ್ನು 14 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವಾ ಐಟಂ ನಂ. 4 ರ ಆಸ್ತಿಯನ್ನು ನನ್ನ ತಂದೆ-ತಾಯಿ ಹಾಗು ಸಹೋದರ 14 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ನನಗೆ ತಡವಾಗಿ ಗೊತ್ತಾಗಿರುತ್ತದೆ. ಸದರಿ ಕ್ರಯ ಪತ್ರಕ್ಕೆ ನನ್ನ ಅತ್ತೆಯಂದಿರಾದ 9, 10 ಹಾಗು 12 ನೇ ಪ್ರತಿವಾದಿಗಳು ಸಹಿ ಮಾಡಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ದೊಡ್ಡಪ್ಪ ಅಂದರೆ 4 ನೇ ಪ್ರತಿವಾದಿಯ ಗಂಡ ಹಾಗು 5 ರಿಂದ 8 ನೇ ಪ್ರತಿವಾದಿಗಳ ತಂದೆಯಾದ ನರಸಶೆಟ್ಟಿ ದಿನಾಂಕಃ 11.10.1971 ರಂದು ದಾವಾ ಐಟಂ ನಂ. 1 ಅಂದರೆ 1506/535, 1505/534 ಮತ್ತು 1507/536 ರ ನಿವೇಶನಗಳನ್ನು ಶ್ಯಾನುಭೋಗ ನಂಜುಂಡಯ್ಯರವರಿಂದ ನೋಂದಾಯಿತ ಕ್ರಯ ಪತ್ರದ ಅಡಿಯಲ್ಲಿ ಖರೀದಿಸಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಐಟಂ ನಂ. 1 ರ ಆಸ್ತಿಯನ್ನು 2 ನೇ ಪ್ರತಿವಾದಿಯಾದ ನನ್ನ ತಾಯಿ 4 ರಿಂದ 8 ನೇ ಪ್ರತಿವಾದಿಗಳಿಂದ ದಿನಾಂಕಃ 04.03.2016 ರಂದು ನೋಂದಾಯಿತ ಕ್ರಯ ಪತ್ರದ ಮೂಲಕ ರೂ. 80,000/- ಕ್ಕೆ ಖರೀದಿ ಮಾಡಿರುತ್ತಾರೆಂದರೆ ಆ ಬಗ್ಗೆ ನನಗೆ

ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನನ್ನ ತಾಯಿ ಅವರ ದುಡಿಮೆಯ ಉಳಿಕೆ ಹಣ ಹಾಗು ತಾಯಿಯ ಮನೆಯಿಂದ ಕೊಟ್ಟ ಹಣದಿಂದ ಖರೀದಿ ಮಾಡಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವಾ ಐಟಂ ನಂ. 1 ರ ಆಸ್ತಿ ನನ್ನ ತಾಯಿಯ ಸ್ವಯಾರ್ಜಿತ ಆಸ್ತಿ ಆದ್ದರಿಂದ ಅದರಲ್ಲಿ ಯಾರಿಗೂ ಹಕ್ಕು-ಅಧಿಕಾರ ಇರುವುದಿಲ್ಲವೆಂದರೆ ಸರಿಯಲ್ಲ. ದಾವಾ ಐಟಂ ನಂ.4 ರ ಆಸ್ತಿ ಮೂಲತಃವಾಗಿ ನನ್ನ ತಾತನಿಗೆ ಸೇರಿದ ಆಸ್ತಿಯಾಗಿದ್ದು ಅವರ ಮಕ್ಕಳಾದ ನನ್ನ ತಂದೆ ಹಾಗು ನನ್ನ ದೊಡ್ಡಪ್ಪಂದಿರು ಒಟ್ಟು ಕುಟುಂಬದ ಆಸ್ತಿಗೆ ಸಂಬಂಧಿಸಿದಂತೆ ಅವರ ಸಹೋದರಿಯರ ಒಪ್ಪಿಗೆ ವಿಭಾಗ ಮಾಡಿಕೊಂಡಿದ್ದು ಸದರಿ ವಿಭಾಗದಲ್ಲಿ ದಾವಾ ಐಟಂ ನಂ. 4 ರ ಆಸ್ತಿ ಮಾತ್ರ ನನ್ನ ತಂದೆಯ ಭಾಗಕ್ಕೆ ಬಂದಿದ್ದು ಅದರಲ್ಲಿ ಮಾತ್ರ ನನ್ನ ತಂದೆಗೆ ಹಕ್ಕು-ಅಧಿಕಾರ ಇರುತ್ತದೆಯೇ ಹೊರತು ದಾವಾ ಐಟಂ ನಂ. 2 ಮತ್ತು 3 ರ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು-ಅಧಿಕಾರ ಇರುವುದಿಲ್ಲವೆಂದರೆ ಸರಿಯಲ್ಲ. ನನ್ನ ತಂದೆಯು ಸದರಿ ದಾವಾ ಐಟಂ ನಂ.4 ರ ಆಸ್ತಿಯನ್ನು ಕುಟುಂಬದ ನಿರ್ವಹಣೆ ಹಾಗು ಅಗತ್ಯ ಖರ್ಚಿಗೆ ಸಂಬಂಧಿಸಿದಂತೆ ಮಾರಾಟ ಮಾಡಿದ್ದರಿಂದ ಸದರಿ ಆಸ್ತಿಯಲ್ಲಿಯೂ ಸಹ ನನಗೆ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. ಸದರಿ ದಾವಾ ಐಟಂ ನಂ.4 ರ ಕ್ರಯ ಪತ್ರಕ್ಕೆ ನನ್ನ ಅತ್ತೆಯಂದಿರಾದ 9, 10 ಹಾಗು 12 ನೇ ಪ್ರತಿವಾದಿಗಳು ಸಹ ಸಹಿ ಮಾಡಿದ್ದು ಸದರಿ ಕ್ರಯದ ಪ್ರತಿಫಲದ ಹಣದಲ್ಲಿ ಅವರ ಭಾಗಕ್ಕೂ ಹಣ ಸಂದಾಯವಾಗಿರುತ್ತದೆಂದರೆ ಸರಿಯಲ್ಲ. ದಾವಾ ಐಟಂ ನಂ. 5 ರ ಪಹಣಿ ಪತ್ರಿಕೆಯಲ್ಲಿ ಕಾಣಿಸಿರುವ 01 ಎಕರೆ 39 ಗುಂಟೆ ಜಮೀನಿಗೆ ನನ್ನ ಮೊದಲನೇ ದೊಡ್ಡಪ್ಪನ ಹೆಂಡತಿ-ಮಕ್ಕಳು, 2 ನೇ ದೊಡ್ಡಪ್ಪ, ನನ್ನ ತಂದೆ ಹಾಗು ನನ್ನ ಅತ್ತೆಯಂದಿರಾದ

9, 10 ಹಾಗು 12 ನೇ ಪ್ರತಿವಾದಿಗಳಿಗೆ ಸಮಾನ ಹಕ್ಕು ಇರುತ್ತದೆಂದರೆ ಸರಿ. ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಭಾಗಾಂಶದ ಹಕ್ಕು ಬರುವುದಿಲ್ಲವೆಂದರೆ ಸರಿಯಲ್ಲ. ಈ ದಾವೆಯನ್ನು ನಾನು ಸರಿಯಾದ ಮಾಹಿತಿಯನ್ನು ನೀಡಿ ಎಲ್ಲಾ ವಾಸ್ತವಾಂಶವನ್ನು ತಿಳಿಸದೇ ಹೂಡಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆಯ ಆರೋಗ್ಯದ ಸಮಸ್ಯೆ ಹಾಗು ನನ್ನ ತಂದೆಯ ಮನೆಯ ಆರ್ಥಿಕ ಸಮಸ್ಯೆಯ ಸಂಬಂಧ, ದಾವಾ ಐಟಂ ನಂ. 4 ರ ಆಸ್ತಿಯನ್ನು ಭೋಗ್ಯಕ್ಕೆ ನೀಡಿದ್ದ ವಿಚಾರ ಹಾಗು ಸಾಲ ಮಾಡಿ ಸದರಿ ಭೋಗ್ಯವನ್ನು ಬಿಡಿಸಿಕೊಂಡ ವಿಚಾರ ಎಲ್ಲವೂ ಸಹ ನನಗೆ ಗೊತ್ತಿದ್ದಾಗ್ಯೂ ಸಹ ಅವು ಯಾವುದು ಗೊತ್ತಿರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಯನ್ನು ನೀಡಿ ಸುಳ್ಳು ದಾವೆಯನ್ನು ಹೂಡಿದ್ದು ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಭಾಗಾಂಶದ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ.

**15 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**